ಶ್ರೀ ಜಿ. ಎಸ್. ಬಸವರಾಜ್.—ಇದಕ್ಕೆ ಮೆಕ್ಕೆ ಜೋಳ, ಗೋದಿ, ಕಡಲೆಬೇಳೆ ಇತ್ಯಾದಿ ಮಿಕ್ಸ್ ಮಾಡಿರುವುದರ ಜೊತೆಗೆ ಕಲ್ಲು ಕಬ್ಬಿಣದ ಪುಡಿಯು ಸೇರಿರುತ್ತದೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗಿರುವುದಲ್ಲದೆ ಇದನ್ನು ತಿಂದ ಎಷ್ಟೋ ಮಕ್ಕಳೂ ಕೂಡ ಸತ್ತುಹೋಗಿರುತ್ತಾರೆ. ಪರಿಸ್ಥಿತಿ ಹೀಗಿದ್ದರೂ ಕೂಡ ಸರ್ಕಾರದವರು ಏನು ಕ್ರಮ ತೆಗೆದು ಕೊಳ್ಳದೆ ಇರತಕ್ಕಂಥದ್ದು ಬಹಳ ಶೋಚನೀಯವಾಗಿದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅದು ಯಾವ ಶಾಲೆಗೆ ಸಂಬಂಧಪಟ್ಟಿರುತ್ತದೆಂಬುದರ ಬಗ್ಗೆ ಸ್ಪೆಸಿಫಿಕ್ ಇನ್‌ಸಿಡೆಂಟ್ ಇದ್ದರೆ ಕೊಡಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗ್ರಾಮೀಣ ಪಶುವೈದ್ಯ ಶಾಲೆಗಳ ಮತ್ತು ಆಲ್ಲಿನ ಸಿಬ್ಬಂದಿಯ ಬಗ್ಗೆ

೨೮೮ (೯೮) ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಪಶುಸಂಗೋಪನೆ ಪಶು ವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪಶುವೈದ್ಯ ಶಾಲೆಗಳೆಷ್ಟು ಹಾಗೂ ಅವುಗಳಿರುವ ಸ್ಥಳಗಳಾವುವು ?

(ಆ) ಇವುಗಳಲ್ಲಿ ಎಷ್ಟು ಕಡೆ ಮತ್ತು ಯಾವ ಸ್ಥಳಗಳಲ್ಲಿ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆ, ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ?

(ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವನಾಥರೆಡ್ಡಿ (ಮಾನ್ಯ ಪಶುಸಂಗೋಪನಾ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೩ ಪಶುವೈದ್ಯ ಶಾಲೆಗಳು ಇರುವುವು. ಅವುಗಳಿರುವ ಸ್ಥಳಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ವಿವರಿಸಲಾಗಿದೆ.

(ಆ) ಸೂಳ್ಯದ ಪಶುವೈದ್ಯ ಶಾಲೆಯಲ್ಲಿ ಸಹಾಯಕ ನಿರ್ದೇಶಕರ ಹುದ್ದೆಯೊಂದು ಒಂದು ತಿಂಗಳಿಂದ ಖಾಲಿ ಇರುವುದು. ಇದಲ್ಲದೆ ೩೦ ಪಶುಪರೀಕ್ಷಕರು ಹಾಗೂ ೪೮ ಔಷಧಿ ಮಿಶ್ರಣಕಾರರ ಹುದ್ದೆಗಳು ಒಂದು ವರ್ಷದಿಂದ ಖಾಲಿ ಇರುವುವು. ಇವುಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ತೋರಿಸಲಾಗಿದೆ.

(ಇ) ಸೂಳ್ಯದ ಸಹಾಯಕ ನಿರ್ದೇಶಕರ ಹುದ್ದೆಯನ್ನು ಬಡ್ತಿ ಹೊಂದಿದ ಪಶುವೈದ್ಯರಿಂದ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇಲಾಖೆಯ ನೇಮಕಾತಿ ಸಮಿತಿಯು ಪಶುಪರೀಕ್ಷಕರನ್ನು ಮತ್ತು ಔಷಧಿ ಮಿಶ್ರಣಕಾರ ಹುದ್ದೆಗಳನ್ನು ಆರಿಸಲು ಕ್ರಮ ತೆಗೆದುಕೊಳ್ಳಲಿದೆ. ಈ ರೀತಿ ಆರಿಸಿಕೊಳ್ಳಲಾದ ವಿದ್ಯಾರ್ಥಿಗಳು ತರಬೇತಿ ಹೊಂದಬೇಕಾಗಿದೆ. ಇದಕಾಗಿ ಈಗಾಗಲೇ ತರಬೇತಿ ಕೇಂದ್ರಗಳನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ, ಮತ್ತು ಅವುಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಒಂದು ವರ್ಷ ಅಥವಾ ಎರಡು ವರ್ಷ ಕರಾರಿನ ಮೇಲೆ ನಿವೃತ್ತ ಪಶುಪರೀಕ್ಷಕರನ್ನು ಮತ್ತು ಔಷಧಿ ಮಿಶ್ರಣಕಾರರನ್ನು ನೇಮಕ ಮಾಡಿಕೊಳ್ಳಲು ಸರ್ಕಾರವು ಪರಿಶೀಲಿಸುತ್ತಿದೆ.

ಪಟ್ಟಿ–೧

ಪಶು ಆಸ್ಪತ್ರೆ	ಪಶುವೈದ್ಯ ಶಾಲೆ	ಗ್ರಾಮೀಣ ಪಶುವೈದ್ಯ ಶಾಲೆ	ವಿ.ಎ.ಸಿ.	ಕೆ.ವಿ.ಎಸ್.	ಎ.ಐ.ಸಿ.
೧. ಮಂಗಳೂರು	೧. ಬಂಟವಾಳ	೧. ಕುರನಾಡು	೧. ಮಂಜಿ	೧. ಬಾಲಕುಂಡೆ	೧. ಬಂಟವಾಳ್
೨. ಪುತ್ತೂರು	೨. ವಿಠಲ	೨. ರಾಯಿ	೨. ಬೆಳ್ಳಣಿ	೨. ಹಳೇಯಂಗಡಿ	೨. ಬೆಳತಂಗಡಿ
	೩. ಬೆಳತಂಗಡಿ	೩. ಅದ್ಯಂದಕ		೩. ನಿರುಡೆ	೩. ಕುಂದಾಪುರ
	೪. ಕುಂದಾಪುರ	೪. ಬೆಂಜನಪಡವು		೪. ಮುಂಡಕೂರು	೪. ಬೈಂದೂರು
	೫. ಶಂಕರನಾರಾಯಣ	೫. ಮಣಿ		೫. ನಿದ್ದೊಡಿ	೫. ಕಾರಕಳ
	೬. ಬೈಂದೂರು	೬. ನಾರ್ವಿ		೬. ಸೂರತ್‌ಕಲ್	೬. ಮಂಗಳೂರು
	೭. ಕಾರಕಾಳ	೭. ವೇನೂರು		೭. ಯಕ್ಕರ್	೭. ಪುತ್ತೂರು
	೮. ಮೂಡಬಿದ್ರೆ	೮. ಆಲದಂಗಡಿ		೮. ಕರನಾಡು	೮. ಸೂಳ್ಯ
	೯. ಪೆಬ್ರಿ	೯. ಧರ್ಮಸ್ಥಳ		೯. ಕಿಣ್ಣಿಗೋಲಿ	೯. ಉಡುಪಿ
	೧೦. ಗಂಡೆಮಠ	೧೦. ಬೆಳ್ವಿ			೧೦. ಉಪ್ಪಿನಂಗಡಿ
	೧೧. ಬಾಜ್ಪೆ	೧೧. ವಂಡಸೆ			೧೧. ಹೆಜ್ರ
	೧೨. ಮುಲ್ಕಿ	೧೨. ಸುಣಸೆಮುಕ್ಕಿ			
	೧೩. ಬೊಲಾರಾ	೧೩. ಗುಜೋಡಿ			
	೧೪. ಉಪ್ಪಿನಂಗಡಿ	೧೪. ಕೊಲ್ಲೂರು			
	೧೫. ಪಣಜಿ	೧೫. ಕೇದೂರು			
	೧೬. ಸುಳ್ಯ	೧೬. ನಿಟ್ಟೇ			
	೧೭. ಸುಬ್ರಮಣ್ಯ	೧೭. ಶಿರಧಾಡಿ			
	೧೮. ಉಡುಪಿ	೧೮. ನಕ್ರೆ			
	೧೯. ಕೋಟಿ	೧೯. ಮುನಿಯಾಲ್			
	೨೦. ಭ್ರುಂಹಾವರ್	೨೦. ಕೋಡಿಯಂಬಾಡಿ			

ಪಶು ಆಸ್ಪತ್ರೆ	ಪಶುವೈದ್ಯ ಶಾಲೆ	ಗ್ರಾಮೀಣ ಪಶುವೈದ್ಯ ಶಾಲೆ	ವಿ.ಎ.ಸಿ.	ಕೆ.ವಿ.ಎಸ್.	ಎ.ಐ.ಸಿ.
	೨೧. ಕಾಪು	೨೧. ಕಡಬ			
	೨೨. ಮಣಿಪಾಲ	೨೨. ಗುತ್ತಿಗಾರ್			
	೨೩. ಹಿರೇಯಡಕ	೨೩. ಪರಂಜ			
		೨೪. ಬೆಳ್ಳಾರೆ			
		೨೫. ಹೆಗ್ಗಂಜಿ			
		೨೬. ಅಡಮಾರ್			
		೨೭. ಕಲ್ಯಾಣಪುರ			
		೨೮. ಕುಕ್ಕೇಹಳ್ಳಿ			
		೨೯. ಕೋಟಿ			
		೩೦. ಮಾಲ್ಪೆ			
		೩೧. ಪಾಡುಬಿದ್ರಿ			
		೩೨. ಪಾಲಿಮಾರ್			
		೩೩. ಉದಯವಾರ್			
		೩೪. ಮಣಪುರ			
		೩೫. ಶಿವರ			

ಪಟ್ಟಿ–೨

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪಶುವೈದ್ಯ ಶಾಲೆಗಳಲ್ಲಿ ಮತ್ತು ಇತರೆ ಕೇಂದ್ರುಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ:

೧. ೩೦ ಪಶುಪರೀಕ್ಷಕರ ಹುದ್ದೆಗಳು ಈ ಕೆಳಕಂಡ ಸ್ಥಳಗಳಲ್ಲಿ ಖಾಲಿ ಇವೆ. ಈ ಹುದ್ದೆಗಳು ಈಗ್ಗೆ ಸುಮಾರು ಒಂದು ವರ್ಷದಿಂದ ಖಾಲಿ ಇವೆ.

೧. ಕೃತಕ ಗರ್ಭಧಾರಣ ಉಪ ಕೇಂದ್ರ, ಬಂಟವಾಳ
೨. ಪಶುವೈದ್ಯ ಶಾಲೆ, ವಿಟ್ಲಲ್
೩. ಎಫ್.ವಿ.ಎ.ಸಿ. ಮಂಜಿ
೪. ಗ್ರಾಮೀಣ ಪಶುವೈದ್ಯ ಶಾಲೆ, ಅಲದಂಗಡಿ
೫. ಕೋಳಿ ಸಾಕಣಿಕೆ ಕೇಂದ್ರ, ಕುಂದಾಪುರ
೬. ಕೃತಕ ಗರ್ಭದಾರಣ ಉಪ ಕೇಂದ್ರ, ಬೈಂದೂರು
೭. ಕೃತಕ ಗರ್ಭದಾರಣ ಉಪಕೇಂದ್ರ. ಕುಂದಾಪುರ
೮. ಪಶುವೈದ್ಯ ಶಾಲೆ, ಶಂಕರನಾರಾಯಣ
೯. ಗ್ರಾಮೀಣ ಪಶುವೈದ್ಯ ಶಾಲೆ, ಕೊಲ್ಲೂರು
೧೦. ಕೃತಕ ಗರ್ಭದಾರಣ ಉಪ ಕೇಂದ್ರ, ಹೆಬ್ರಿ
೧೧. ಪಶುವೈದ್ಯ ಶಾಲೆ, ಬಜಪೆ
೧೨. —,,— ಮುಲ್ಕಿ
೧೩. ಆರ್.ಪಿ.ಸಿ.ಪಿ. ತಲಾಪಾಡಿ
೧೪. —,,— ತಲಪಾಡಿ
೧೫. —,,— ತಲಪಾಡಿ
೧೬. ಮೂಲ ಗ್ರಾಮೀಣ ಯೋಜನೆ, ಸೂರ್ಕಲ್
೧೭. —ಅದೇ— ನಿರುಡೆ
೧೮. —,,— ಮುಂಡಕೂರು
೧೯. —,,— ನಿಡ್ಡೊಡಿ
೨೦. ಜಿಲ್ಲಾ ಕಛೇರಿ, ಮಂಗಳೂರು
೨೧. ಕೃತಕ ಗರ್ಭದಾರಣಾ ಉಪ ಕೇಂದ್ರ, ಪುತ್ತೂರು
೨೨. —,,— ಉಪ್ಪಿನಂಗಡಿ
೨೩. —,,— ಸುಳ್ಯ
೨೪. ಗ್ರಾಮೀಣ ಪಶುವೈದ್ಯ ಶಾಲೆ, ಪಂಜಾ
೨೫. —,,— ಬ್ರಹ್ಮಪರ
೨೬. ಪಶುವೈದ್ಯ ಶಾಲೆ, ಸುಬ್ರಮಣ್ಯ
೨೭. —,,— ಉಡುಪಿ
೨೮. ಗ್ರಾಮೀಣ ಪಶುವೈದ್ಯ ಶಾಲೆ, ಭೂಲಾರ್
೨೯. ಪಶುವೈದ್ಯ ಶಾಲೆ, ಕೋಟ
೩೦. ಕೃತಕ ಗರ್ಭಧಾರಣಾ ಉಪ ಕೇಂದ್ರ, ಬೆಲತಂಗಡಿ

೨.೪೮ ಕಾಂಪೌಂಡರ್‌ಗಳ ಹುದ್ದೆಗಳು ಈ ಕೆಳಕಂಡ ಸ್ಥಳಗಳಲ್ಲಿ ಖಾಲಿ ಇವೆ ಈ ಹುದ್ದೆಗಳು ಈಗ್ಗೆ ಸುಮಾರು ಒಂದು ವರ್ಷದಿಂದ ಖಾಲಿ ಇವೆ.

೧. ಪಶುವೈದ್ಯ ಶಾಲೆ, ವಿಟ್ಲ
೨. ಗ್ರಾಮೀಣ ಪಶುವೈದ್ಯ ಶಾಲೆ, ರಾಯಿ
೩. —,,— ಬಿನ್‌ಜನಾ ಪಡವು
೪. —,,— ಅದ್ಯಂಡಕ
೫. ಪಶುವೈದ್ಯ ಶಾಲೆ, ಬೆಲತಂಗಡಿ
೬. ಗ್ರಾಮೀಣ ಪಶುವೈದ್ಯ ಶಾಲೆ, ಗುಜ್ಜೆಡಿ
೭. ಪಶುವೈದ್ಯ ಶಾಲೆ, ಶಂಕರನಾರಾಯಣ
೮. ಗ್ರಾಮೀಣ ಪಶುವೈದ್ಯ ಶಾಲೆ, ಕೇಡೂರು
೯. ಪಶುವೈದ್ಯಶಾಲೆ, ಕಾರ್ಕಳ
೧೦. ಗ್ರಾಮೀಣ ಪಶುವೈದ್ಯ ಶಾಲೆ, ಸಿರತಾಡಿ
೧೧. ಪಶುವೈದ್ಯ ಶಾಲೆ, ಜೋಲಾರ್
೧೨. —,,— ಪಣಜಿ
೧೩. ಗ್ರಾಮೀಣ ಪಶುವೈದ್ಯ ಶಾಲೆ, ಜಿಲ್ಲ್ಲಾರ
೧೪. ಪಶುವೈದ್ಯ ಶಾಲೆ, ಸುಬ್ರಮಣ್ಯ
೧೫. —,,— ಉಡುಪಿ
೧೬. —,,— ಮಣಿಪಾಲ
೧೭. —,,— ಕಾಪು
೧೮. —,,— ಕೋಟ
೧೯. ಗ್ರಾಮೀಣ ಪಶುವೈದ್ಯ ಶಾಲೆ, ಮಲ್ಪೆ
೨೦. —,,— ಮಣಿಯಾಳ
೨೧. —,,— ಉದ್ಯಾವರ್
೨೨. —,,— ಅಲದಂಗಡಿ
೨೩. —,,— ಧರ್ಮಸ್ಥಳ
೨೪. —,,— ಕುರುನಾಡ್
೨೫. —,,— ಮಣಿ
೨೬. —,,— ವಂಡಸೆ
೨೭. —,,— ಹುಣಸಿಮಕ್ಕಿ
೨೮. ಕೃತಕ ಗರ್ಭದಾರಣಾ ಕೇಂದ್ರ, ಪುತ್ತೂರು
೨೯. ಗ್ರಾಮೀಣ ಪಶುವೈದ್ಯ ಶಾಲೆ, ನಿಟ್ಟೆ
೩೦. —,,— ನಕರೆ
೩೧. —,,— ಮುಲ್ಕಿ
೩೨. —,,— ಕೂಟಕರ್
೩೩. ಮೂಲ ಗ್ರಾಮೀಣ ಯೋಜನೆ, ಕಿನ್ನಿಗೋಲಿ
೩೪. ಕೃತಕ ಗರ್ಭದಾರಣಾ ಕೇಂದ್ರ, ಮಂಗಳೂರು

೩೫. —,,— ಉಡುಪಿ
೩೬. ಗ್ರಾಮೀಣ ಪಶುವೈದ್ಯಶಾಲೆ, ಕೊಡಿಯಂಬಾಡಿ
೩೭. —,,— ಕಡಬ
೩೮. —,,— ಗುತ್ತಿಗಾರ
೩೯. ಪಶುವೈದ್ಯ ಶಾಲೆ, ಪಣಜಿ
೪೦. ಗ್ರಾಮಾಂತರ ಪಶುವೈದ್ಯ ಶಾಲೆ, ಕಲ್ಯಾಣಪುರ
೪೧. —,,— ಸಿರಿವಾ
೪೨. ಪಶುವೈದ್ಯ ಶಾಲೆ, ಕೋಟಿ
೪೩. ಗ್ರಾಮೀಣ ಪಶುವೈದ್ಯ ಶಾಲೆ, ಆಡಮಾರ್
೪೪. —,,— ಪಾಡುಬಿದರಿ
೪೫. ಗ್ರಾಮೀಣ ಪಶುವೈದ್ಯ ಶಾಲೆ, ಕುಕ್ಕೇಹಳ್ಳಿ
೪೬. ಪಶುವೈದ್ಯ ಶಾಲೆ, ಹಿರಿಯಡಕೆ
೪೭. ಗ್ರಾಮಾಂತರ ಪಶುವೈದ್ಯ ಶಾಲೆ, ಪಾಲಿಮಾರ್
೪೮. ಗ್ರಾಮಾಂತರ ಪಶುವೈದ್ಯ ಶಾಲೆ, ಮಣಿಪುರ

ಶ್ರೀ ವಿ. ಧನಂಜಯ ಕುಮಾರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ಅದಕ್ಕೆ ಏನು ಹೇಳಬೇಕು ಎನ್ನುವುದು ಅರ್ಥವಾಗುತ್ತಿಲ್ಲ. ನನಗೆ ಬಹಳ ಗಾಬರಿಯಾಗಿದೆ. ಏತಕ್ಕೆಂದರೆ ಅವರು ಪಟ್ಟಿಯನ್ನು ಕೊಟ್ಟಿದ್ದಾರೆ. ೩೦ ಜನ ಪಶು ಪರೀಕ್ಷಕರ ಹುದ್ದೆಗಳು ಮತ್ತು ೪೮ ಜನ ಕಾಂಪೌಂಡರ್ ಹುದ್ದೆಗಳು ಸುಮಾರು ವರ್ಷಗಳಿಂದ ಖಾಲಿ ಇವೆ. ಈ ಒಂದು ಜಿಲ್ಲೆಯಲ್ಲಿಯೇ ೨೫ ಪಶುವೈದ್ಯ ಶಾಲೆಗಳಲ್ಲಿ ಸುಮಾರು ೪೮ ಜನ ಕಾಂಪೌಂಡರ್ ಹುದ್ದೆಗಳು ಖಾಲಿ ಇವೆ. ಅಂದರೆ ಒಂದು ವರ್ಷದ ಹಿಂದೆ ಅವರು ಎಲ್ಲರೂ ಕೆಲಸ ಮಾಡುತ್ತಿದ್ದರು ಎಂದ ಹಾಗಾಯಿತು. ನನ್ನ ಪ್ರಶ್ನೆ ಒಂದೇ ವರ್ಷದೊಳಗೆ ಈ ೩೦-೪೫ ಜನರನ್ನು ಸಾರಾಸಗಟಾಗಿ ವರ್ಗಾವಣೆ ಮಾಡಲಾಯಿತೆ ? ಎರಡನೆಯದಾಗಿ ೨೫ ಪಶುವೈದ್ಯ ಶಾಲೆಗಳಲ್ಲಿ ಎಷ್ಟು ಪಶುವೈದ್ಯಶಾಲೆಗಳು ಬಾಗಿಲು ತೆಗೆಯದೆ ಹಾಗೇ ಇವೆ ? ಮೂರನೆಯದಾಗಿ ಯಾವುದೇ ಪಶುವೈದ್ಯಶಾಲೆಯಲ್ಲಿ ಕೆಲಸ ಮಾಡದೆ ಇರತಕ್ಕಂಥ ಪಶುವೈದ್ಯರು ಮತ್ತು ಕಾಂಪೌಂಡರ್‌ಗಳು ಎಷ್ಟು ಜನ ಇದ್ದಾರೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ವಿಶ್ವನಾಥರೆಡ್ಡಿ.—ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲ ಸೇರಿ ೨೩ ಪಶುವೈದ್ಯ ಶಾಲೆಗಳಿವೆ. ಈ ಪಶುವೈದ್ಯಶಾಲೆಗಳಿಗೆ ಸಂಬಂಧಪಟ್ಟಂತೆ ೩೦ ಪಶುಪರೀಕ್ಷಕರ ಹಾಗೂ ೪೮ ಔಷಧಿ ವಿಶ್ರಾಣಕಾರರ ಹುದ್ದೆಗಳು ಒಂದು ವರ್ಷದಿಂದ ಖಾಲಿ ಇವೆ ಎಂದು ಹೇಳಿದ್ದೇನೆ. ಆದರೆ ಒಂದು ವರ್ಷದ ಹಿಂದೆ ಏನು ಪರಿಸ್ಥಿತಿ ಇತ್ತು ಎಂಬ ವಿವರ ನನ್ನ ಬಳಿ ಈಗ ಇಲ್ಲ. ಈ ಬಗ್ಗೆ ಈಗಾಗಲೇ ಪಶುವೈದ್ಯರನ್ನು, ಪಶುಪರೀಕ್ಷಕರನ್ನು ಹಾಗೂ ಕಾಂಪೌಂಡರ್‌ಗಳನ್ನು ತರಬೇತಿಗೊಳಿಸಲು ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈದರ ನಂತರ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಮತ್ತು ೬೦ ವರ್ಷಕ್ಕಿಂತ ಕಡಿಮೆ ವಯಸ್ಸಾದವರನ್ನು ಪುನಃ ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ವಿ. ಧನಂಜಯ ಕುಮಾರ್.—ಮಾನ್ಯ ಮಂತ್ರಿಗಳಿಗೆ ನನ್ನ ಪ್ರಶ್ನೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಇಲ್ಲಿ ಒಂದು ವರ್ಷದಿಂದ ಈ ಹುದ್ದೆಗಳು ಖಾಲಿ ಇವೆ ಎಂದರೆ ಅದಕ್ಕೂ ಮೊದಲು...

ಅಧ್ಯಕ್ಷರು.—ಆ ವಿವರ ಇಲ್ಲ ಎಂದು ಹೇಳಿದ್ದಾರೆ.

ಶ್ರೀ ವಿ. ಧನಂಜಯ ಕುಮಾರ್.—ಈಗಿರುವ ಪಶುವೈದ್ಯ ಶಾಲೆಗಳ ಪೈಕಿ ಎಷ್ಟು ಬಾಗಿಲು ಮುಚ್ಚಿದೆ ಮತ್ತು ಬಾಗಿಲು ತೆರೆದಿರುವ ಕಡೆಗಳಲ್ಲಿ ಸಿಬ್ಬಂದಿಯ ಕೊರತೆ ಎಷ್ಟು ಇದೆ ಹಾಗೂ ಖಾಲಿ ಕೆಲಸ ಮಾಡುತ್ತಿರುವವರ ಸಂಖ್ಯೆಯನ್ನು ಕೊಡುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.—ಅದರ ವಿವರಗಳು ನನ್ನ ಹತ್ತಿರ ಈಗ ಇಲ್ಲ. ಅದನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ವಿ. ಎಸ್. ಆಚಾರ್.—ಸಂಚಾರಿ ಪಶುವೈದ್ಯಶಾಲೆಗಳು ಎಷ್ಟಿವೆ ? ಇವುಗಳ ಪೈಕಿ ಒಂದು ದಿನವೂ ಸಹ ಸಂಚಾರ ಮಾಡದಿರುವುದು ಎಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ.—ಇದಕ್ಕೆ ತಾವು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಚಿಕ್ಕೋಡಿ ತಾಲ್ಲೂಕಿನಲ್ಲಿ ಶಾಲಾ ಕಟ್ಟಡಗಳಿಲ್ಲದ ಗ್ರಾಮಗಳ ಹೆಸರುಗಳು

೨೮೯ (೧೧೮) ಶ್ರೀ ಎ.ಎ. ನಿಂಬಾಳ್ಕರ್ (ಸಾದಲಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಚಿಕ್ಕೋಡಿ ತಾಲ್ಲೂಕಿನಲ್ಲಿ ಶಾಲಾ ಕಟ್ಟಡಗಳು ಇಲ್ಲದ ಶಾಲೆಗಳ ಸಂಖ್ಯೆ ಮತ್ತು ಹೆಸರು.

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

ಚಿಕ್ಕೋಡಿ ತಾಲ್ಲೂಕಿನಲ್ಲಿ ಒಟ್ಟು ೧೭೮ ಪ್ರಾಥಮಿಕ ಶಾಲೆಗಳಿದ್ದು, ಇವುಗಳ ಪೈಕಿ ೫೬ ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ, ಸ್ವಂತ ಕಟ್ಟಡಗಳು ಇರುವುದಿಲ್ಲ. ಶಾಲಾ ಕಟ್ಟಡಗಳು ಇಲ್ಲದ ಶಾಲೆಗಳ ಪಟ್ಟಿಯನ್ನು ಲಗತ್ತಿಸಿದೆ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಶಾಲಾ ಕಟ್ಟಡಗಳು ಇಲ್ಲದ ಶಾಲೆಗಳ ಪಟ್ಟಿ

೧) ಕನ್ನಡ ಗಂಡು ಮಕ್ಕಳ ಶಾಲೆ, ನಾಗರಾಳ್
೨) ಕನ್ನಡ ಗಂಡು ಮಕ್ಕಳ ಶಾಲೆ, ಯಡರವಾಡಿ
೩) ಕನ್ನಡ ಗಂಡು ಮಕ್ಕಳ ಶಾಲೆ, ಕರೋಶಿ ತೋಟ
೪) ಕನ್ನಡ ಗಂಡು ಮಕ್ಕಳ ಶಾಲೆ, ಬಸವನಗರ
೫) ಕನ್ನಡ ಗಂಡು ಮಕ್ಕಳ ಶಾಲೆ, ಬೆಳಗಲ್ಲಿ
೬) ಕನ್ನಡ ಗಂಡು ಮಕ್ಕಳ ಶಾಲೆ, ಚಿಂಗದಡ್ಡಿ
೭) ಕನ್ನಡ ಗಂಡು ಮಕ್ಕಳ ಶಾಲೆ, ಚಿಂದುರ್‌ತೆಕ್
೮) ಕನ್ನಡ ಗಂಡು ಮಕ್ಕಳ ಶಾಲೆ, ಕಗ್ಯಗೋಡಮಡಿ
೯) ಕನ್ನಡ ಗಂಡು ಮಕ್ಕಳ ಶಾಲೆ, ನಂದಿ ಸಕ್ಕರೆ ಕಾರ್ಖಾನೆ
೧೦) ಕನ್ನಡ ಗಂಡು ಮಕ್ಕಳ ಶಾಲೆ, ಪುಟನ್ನವಾಡಿ
೧೧) ಕನ್ನಡ ಗಂಡು ಮಕ್ಕಳ ಶಾಲೆ, ಸಂಜೀವನಗರ
೧೨) ಕನ್ನಡ ಗಂಡು ಮಕ್ಕಳ ಶಾಲೆ, ಪಸಬಿನಕೋಡಿ
೧೩) ಕನ್ನಡ ಗಂಡು ಮಕ್ಕಳ ಶಾಲೆ, ಯದುರ್‌ವಾಡಿ
೧೪) ಕನ್ನಡ ಹೆಣ್ಣು ಮಕ್ಕಳ ಶಾಲೆ, ಅಂಕಲಿ
೧೫) ಕನ್ನಡ ಹೆಣ್ಣು ಮಕ್ಕಳ ಶಾಲೆ, ಕರೋಶಿ
೧೬) ಕನ್ನಡ ಹೆಣ್ಣು ಮಕ್ಕಳ ಶಾಲೆ, ಕೂಥಾಲಿ
೧೭) ಕನ್ನಡ ಹೆಣ್ಣು ಮಕ್ಕಳ ಗಂಡು ಮಕ್ಕಳ ಶಾಲೆ, ಮಂಜರಿ
೧೮) ಕನ್ನಡ ಗಂಡು ಮಕ್ಕಳ ಶಾಲೆ, ಹತ್ತರವಾಡ್
೧೯) ಮಾದರಿ ಗಂಡು ಮಕ್ಕಳ ಶಾಲೆ, ನ್ಯಾಲನ್ ಜಜ್
೨೦) ಮಾದರಿ ಗಂಡು ಮಕ್ಕಳ ಶಾಲೆ, ನಂ. ೨, ಕಡಕಲಟ್